ಶ್ರೀ ಬಿ ಎಸ್. ಯಡಿಯೂರಪ್ಪ.—ರೂಲ್ಸ್ ಪ್ರಕಾರ, ಕ್ಯಾಲೆಂಡರ್ ಆಫ್ ಇವೆಂಟ್ಸ್‌ನಲ್ಲಿ ೯೦ ದಿವಸಗಳ ಒಳಗೆ ಚುನಾವಣೆ ನಡೆಯಬೇಕೆಂದು ಇದೆ. ೯೦ ದಿವಸಗಳ ಒಳಗೆ ಚುನಾವಣೆ ನಡೆಯದೇ ಹೋದರೆ, ಕೋರ್ಟಿಗೆ ಹೋಗಿ ಸ್ಟೇ ತರುವ ಅವಕಾಶ ಇದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಆಗ ಚುನಾವಣೆಗಳ ಬಗ್ಗೆ ಸಿದ್ಧತೆ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿ ಕಷ್ಟ ಏನು ಬಂತು ಎಂದರೆ ಮುನಿಸಿಪಾಲಿಟಿಗಳಲ್ಲಿ ಚುನಾವಣೆ ಮುಂದೂಡುವುದಕ್ಕೆ ಅವಕಾಶ ಇತ್ತು. ಆದರೆ ಜಿಲ್ಲಾಪರಿಷತ್ತು ಮತ್ತು ತಾಲ್ಲೂಕ್‌ಪರೇಷನ್‌ಗಳಲ್ಲಿ ಚುನಾವಣೆಗಳನ್ನು ಕ್ಯಾನ್ಸಲ್ ಮಾಡುವುದಕ್ಕೆ ಇಲ್ಲವೇ ಚುನಾವಣೆ ಮುಂದೂಡುವುದಕ್ಕೆ ಅವಕಾಶ ಇರಲಿಲ್ಲ. ಇದರ ಸಲುವಾಗಿ ಸುಗ್ರೀವಾಜ್ಞೆಯನ್ನು ತಂದಿದ್ದೇವೆ. ಚುನಾವಣೆ ಮುಂದೂಡುವುದಕ್ಕೆ ಅವಕಾಶ ಇಲ್ಲದಿದ್ದುದಕ್ಕೆ ಈ ಸುಗ್ರೀವಾಜ್ಞೆಯನ್ನು ಹೊರಡಿಸಿಬಿಟ್ಟಿದ್ದೇವೆ. ಅದಕ್ಕೆ ಮೊದಲು ಯಾವ ತಾರೀಖಿನ್ನು ನಿಗದಿ ಮಾಡಿದ್ದವು, ಆವಾಗ ಕಾರಣಾಂತರಗಳಿಂದ ಆವತ್ತಿನದಿವಸ ಪೋಲಿಂಗ್ ಆಗುವುದು ಕಷ್ಟವಾಗುತ್ತದೆ ಎನ್ನುವ ಕಾರಣಕ್ಕಾಗಿ ಮುಂದಕ್ಕೆ ಹಾಕಲಾಯಿತು. ಕೆಲವರಿಗೆ ಒಂದು ಕನ್‌ಫ್ಯೂಶನ್ ಏನು ಇತ್ತು ಎಂದರೆ ಎಲ್ಲಾ ಚುನಾವಣೆಗಳನ್ನು ರದ್ದು ಮಾಡಿದ್ದಾರೆಯೇ ಎಂದು. ಆದರೆ ಪೋಲಿಂಗ್ ಡೇಟ್‌ನ್ನು ಮಾತ್ರ ರದ್ದು ಮಾಡಿ ಚುನಾವಣೆಯನ್ನು ಮುಂದೆ ಹಾಕಿದ್ದೇವೆಂದು ಈಗಾಗಲೇ ಸ್ಪಷ್ಟೀಕರಣ ಕೊಟ್ಟಿದ್ದೇವೆ. ಚುನಾವಣೆಯ ಪ್ರೊಸೆಸ್ ಏನು ಸ್ಟಾರ್ಟ್ ಆಗಿತ್ತು, ಅದು ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ಅದು ಮುಂದುವರೆಯುತ್ತದೆ. ಮುಂದೆ ಹಾಕಿದ್ದು ಎಂದರೆ ಡೇಟ್ ಆಫ್ ಪೋಲಿಂಗ್ ಮಾತ್ರ, ಮತದಾನದ ತಾರೀಖಿನ್ನು ಮೊದಲು ಏನು ನಿಗದಿ ಮಾಡಿದ್ದೆವು, ಅದನ್ನು ಕ್ಯಾನ್ಸಲ್ ಮಾಡಿ ಮುಂದಿನ ತಾರೀಖಿನ್ನು ನಿಗದಿ ಮಾಡಿದೆವು, ಏಕೆಂದರೆ ಕೆಲವಾರು ಸ್ನೇಹಿತರು ಬಂದು ಹೇಳಿದರು, ಈಗ ನಮಗೆ ಕಷ್ಟ ಇದೆ, ನಮಗೆ ರಂಜಾನ್ ಇದೆ ಎಂದು. ಈ ರೀತಿ ಅನೇಕ ಮನವಿಗಳು ಬಂದಿದ್ದರಿಂದ ಮತ್ತೆ ವಿಚಾರ ಮಾಡಿ ಕೊನೆಗೆ ೨೯ನೇ ಏಪ್ರಿಲ್ ೧೯೯೦ ರಂದು ಚುನಾವಣೆಗಳು ಆಗಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರಲ್ಲಿ ಯಾವ ತರಹದ ಬದಲಾವಣೆಯೂ ಇಲ್ಲ. ೨೯ನೇ ಏಪ್ರಿಲ್ ನಂದು ಮತದಾನ ಆಗುತ್ತದೆ.

ಗಮನ ಸೆಳೆಯುವ ಸೂಚನೆ

ಕೋಲಾರ ಜಿಲ್ಲಾಪರಿಷತ್ತು ಉಪಸಮಿತಿಗಳ ನಡವಳಿಕೆಗಳನ್ನು ತಿರಸ್ಕರಿಸಿರುವುದರಿಂದ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವುದರ ಬಗ್ಗೆ

ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾ ಪರಿಷತ್ತು ೧೪-೩-೯೦ರಂದು ಎಲ್ಲಾ ಉಪ-ಸಮಿತಿಗಳ ನಡವಳಿಕೆಗಳನ್ನು ತಿರಸ್ಕರಿಸಿರುವುದರಿಂದ ಒಂದು ಕೋಟಿ ರೂಪಾಯಿಗೂ ಮೀರಿ ವ್ಯಾಪ್ತಿಗತ ಆಗಿರುವುದರಿಂದ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವುದರ ಬಗ್ಗೆ ನಾನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಪಶುಸಂಗೋಪನೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾಪರಿಷತ್ತಿನ ೧೪-೩-೯೦ ರಂದು ನಡೆದ ಉಪ ಸಮಿತಿಗಳ ನಡವಳಿಕೆಗಳನ್ನು ತಿರಸ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆ ಉಪಸಮಿತಿಗಳ ನಡವಳಿಕೆಗಳಲ್ಲಿ ಯಾವ ವಿಷಯದ ಮೇಲೆ ತೀರ್ಮಾನ ತೆಗೆದುಕೊಳ್ಳಲಾಗಿತ್ತೋ ಆದರ ಮೇಲೆ ಯೋಜನೆಗಳ ಅನುಷ್ಠಾನ ಕುಂಠಿತವಾಗುವುದರಿಂದ ಅವಲಂಬಿಸಿರುತ್ತದೆ. ಆಯವ್ಯಯದಲ್ಲಿ ಶೇಕಡಾ ೨೫ರಷ್ಟು ಹಣ ಒಂದು ವರ್ಷದಲ್ಲಿ ಉಳಿತಾಯವಾದರೆ ಅದನ್ನು ಮುಂದಿನ ಸಾಲಿಗೆ ತೆಗೆದುಕೊಳ್ಳಬಹುದಾಗಿದೆ. ಅದಕ್ಕೂ ಹೆಚ್ಚಿನ ಹಣ ಉಳಿತಾಯವಾದರೆ ಅದು ಲ್ಯಾಪ್ಸ್ ಆಗುತ್ತದೆ.

†ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಈ ಉತ್ತರದ ಬಗ್ಗೆ ಏನು ಹೇಳಬೇಕೆಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಇಲ್ಲಿ ಒಂದೇ ಪದದಲ್ಲಿ ಉಪಸಮಿತಿಗಳ ನಡವಳಿಕೆಗಳನ್ನು ತಿರಸ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಹೀಗಾದರೆ ನಾನು ಏನು ಪ್ರಶ್ನೆಯನ್ನು ಕೇಳಬೇಕು ? ಇದೇನು ಹೊಸ ಪದ್ಧತಿಯನ್ನು ಹೊಸ ರೀತಿಯನ್ನು ಮಾನ್ಯ ಮಂತ್ರಿಗಳು

†ಈ ಚಿಹ್ನೆ ಸಂಬಂಧಪಟ್ಟ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪ್ರಾರಂಭಿಸಿದ್ದಾರೋ ಏನೋ ಗೊತ್ತಾಗುತ್ತಿಲ್ಲ ಇದರ ಬಗ್ಗೆ ವರದಿಯನ್ನು ತರಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಆಗುವುದಿಲ್ಲವೇ? ತರಿಸಿಕೊಳ್ಳಬಾರದೆಂಬ ಅಭಿಪ್ರಾಯ ಏನಾದರೂ ಇದೆಯೋ ಹೇಗೆ? ಇಡೀ ರಾಜ್ಯದಲ್ಲಿ ಕೋಲಾರ ಜಿಲ್ಲೆ ಪರ್ ಕ್ಯಾಪಿಟಾ ಇನ್‌ಕಮ್‌ನಲ್ಲಿ ಕೊನೆಯ ಸ್ಥಾನದಲ್ಲಿದೆ. ಈಗ ಮತ್ತೆ ಅಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡರೆ ಪರ್ ಕ್ಯಾಪಿಟಾ ಇನ್‌ಕಮ್ ಇನ್ನೂ ಕಡಿಮೆಯಾಗುತ್ತದೆ. ನಾನು ಕೂಡ ಆ ಸಭೆಯಲ್ಲಿ ಭಾಗವಹಿಸಿದ್ದೆ. ಈಗಾಗಲೇ ಉಪಸಮಿತಿಗಳ ನಡವಳಿಕೆಗಳನ್ನು ತಿರಸ್ಕರಿಸಲಾಗಿದೆ. ಈ ಕಾರಣದಿಂದ ಇವತ್ತಿನದಿವಸ ಎಲ್ಲಾ ಕಾರ್ಯಗಳೂ ಸ್ಥಗಿತವಾಗುವಂಥ ಪರಿಸ್ಥಿತಿ ಇದೆ. ಆದರೂ ಈ ಬಗ್ಗೆ ಸರ್ಕಾರಕ್ಕೆ ಏನೂ ಗೊತ್ತಿಲ್ಲ ಎಂದರೆ ನೀವು ಏಕೆ ಇಲ್ಲಿ ಕೂತಿದ್ದೀರಿ? ಹಾಗಾದರೆ ಇಲ್ಲಿ ಮಂತ್ರಿಗಳು ಬೇಕಾಗಿಲ್ಲ. ನಡೆದಿರುವುದನ್ನು ತಿಳಿದುಕೊಳ್ಳುವುದಕ್ಕೆ ನಿಮಗೆ ಸಾಧ್ಯವಿಲ್ಲ ಎಂದರೆ ಸರ್ಕಾರವೇ ಬೇಕಿಲ್ಲ. ನಿಮಗೆ ಏನು ಕೆಲಸ ಇದೆ ? ಹೊರಗಡೆ ಹೋಗಿರಿ. ನೀವು ಇಲ್ಲಿ ಏಕೆ ಇದ್ದೀರಿ ? ಮಂತ್ರಿಗಳ ಕೆಲಸ ಏನು ? ಸರ್ಕಾರದ ಕೆಲಸ ಏನು ? ಏತಕ್ಕೋಸ್ಕರ ಸರ್ಕಾರ ಇದೆ ? ಯಾವುದಕ್ಕೂ ಕೂಡ ನಿಮ್ಮಿಂದ ಉತ್ತರ ಇಲ್ಲ. ಸರ್ಕಾರದ ಗಮನಕ್ಕೆ ಇದು ಬಂದಿಲ್ಲವೆಂದರೆ ಅದು ಬರುವುದು ಯಾವಾಗ ?

ಇಂಥಾದ್ದು ಕೂಡ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುವುದಾದರೆ, ಇನ್ನು ಯಾವುದು ನಿಮ್ಮ ಗಮನಕ್ಕೆ ಬರುತ್ತದೆ. ಹೀಗಾದರೆ ಸರ್ಕಾರ ಏಕೆ ಇರಬೇಕು. ಏನು ಕೆಲಸ ಮಾಡುತ್ತಿದೆ, ಏತಕ್ಕೋಸ್ಕರ ಸರ್ಕಾರ ಇಲ್ಲಿರಬೇಕು ? ಅಧ್ಯಕ್ಷರೇ, ನೀವು ನಮ್ಮ ಸಹಾಯಕ್ಕೆ ಬರಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯ, ಜಿಲ್ಲಾಪರಿಷತ್ತು ವಿಶೇಷ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದೆ. ಅಲ್ಲಿ ಅಧಿಕಾರದಲ್ಲಿರತಕ್ಕಂಥವರು ಒಂದು ಪಕ್ಷದವರು, ವಿರೋಧ ಪಕ್ಷದವರು ಇನ್ನೊಂದು ಪಕ್ಷದವರು, ಕರ್ನಾಟಕದಲ್ಲಿರತಕ್ಕ ಎಲ್ಲಾ ಜಿಲ್ಲಾಪರಿಷತ್ತುಗಳ ನಡವಳಿಕೆಗಳನ್ನೂ ಕಣ್ಣಲ್ಲಿಣ್ಣಿಟ್ಟು ನೋಡತಕ್ಕ ಪ್ರಮೇಯ ಸರ್ಕಾರದ ಪಟ್ಟಿದಲ್ಲಿ ಉದ್ಭವಿಸುವುದಿಲ್ಲ. ಏನಾದರೂ ಬರೆದು ಕಳಿಸಿಬಿಸಿದರೆ, ಏನು ಮಾಡುತ್ತೀರಿ, ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದರೆ, ನಾನು ಉತ್ತರ ಕೊಡುತ್ತೇನೆ. ಅಲ್ಲಿನ ಎಲ್ಲಾ ನಿರ್ಣಯಗಳೂ ತಿರಸ್ಕೃತವಾದರೆ ನಾವು ಏನು ಮಾಡುವುದು ? ಆ ರೀತಿ ಏನಾದರೂ ತಿರಸ್ಕಾರ ಆದರೆ, ಆದನ್ನು ಯಾವರೀತಿ ಸರಿ ಮಾಡಬೇಕೆಂದು ದಾರಿ ಹೇಳಿದರೆ, ನಾವು ಸರಿ ಮಾಡುತ್ತೇವೆ. ನಿಮಗೆ ಏನಾದರು ಕಷ್ಟವಾದರೆ, ನಮಗೆ ಮಾರ್ಗದರ್ಶನ ಮಾಡಿ, ನಮಗೆ ಸಹಾಯ ಮಾಡಿ.

ಶ್ರೀ ಸಿ. ಬೈರೇಗೌಡ.—ನಾವು ನೋಟೀಸ್ ಕಳುಹಿಸಿದ ಮೇಲೆ ಅಲ್ಲಿಂದ ವರದಿಯನ್ನು ತಾವು ತರಿಸಬಹುದಾಗಿತ್ತು. ನಿರ್ಣಯಗಳು ತಿರಸ್ಕೃತ ಆಗುತ್ತವೆ, ಹೋಗುತ್ತವೆ, ಎಂದು ಹೇಳುವುದು ಮಂತ್ರಿಗಳ ಉತ್ತರವೇ ? ಇದು ಏನಂ ಉತ್ತರ ಎಂದು ನಮಗೆ ಅರ್ಥವಾಗುತ್ತಿಲ್ಲ. ಬಹುಶಃ ವಿಧಾನ ಸಭೆಯ ಚರಿತ್ರೆಯಲ್ಲಿ ಈ ರೀತಿಯಾಗಿರತಕ್ಕಂಥಾದ್ದು ಇದು ಪ್ರಥಮ ಬಾರಿ ನಾವು ನಡೆದ ವರದಿಯನ್ನು ನಿಮಗೆ ತಿಳಿಸುತ್ತೇವೆ. ನೀವು ಅವರನ್ನು ಕೇಳಬೇಕು. ನಾವು ನೋಟೀಸ್ ಕೊಟ್ಟು ಒಂದು ವಾರ ಆಗಿದೆ. ಅಲ್ಲಿಂದ ಇಲ್ಲಿಯವರೆಗೂ ವರದಿಯನ್ನು ಅಲ್ಲಿಂದ ತರಿಸುವುದಕ್ಕಾಗಲಿಲ್ಲವೇ ? ನಿಮ್ಮಲ್ಲಿ ಚೀಫ್ ಸೆಕ್ರಟರಿ ಇದ್ದಾರೆ. ಅಲ್ಲಿ ಅಧಿಕಾರ ನಡೆಸುವವರು ಒಂದು ಪಕ್ಷದವರಾಗಿರಬಹುದು. ಅಲ್ಲಿ ಬೇರೆಯವರಿಗೆ ಬಹುಮತ ಇದೆಯೋ ಇಲ್ಲವೋ ಆ ಪ್ರಶ್ನೆ ಇಲ್ಲ ಅಲ್ಲಿ ಇವತ್ತು ಒಂದೂ ಕೋಟಿ ರೂಪಾಯಿಗಳು ಲ್ಯಾಪ್ಸ್ ಆಗುವ ಪರಿಸ್ಥಿತಿ ಇದೆ ಈ ಹಣ ಲ್ಯಾಪ್ಸ್ ಆದರೆ ಆ ಜಿಲ್ಲೆಯ ಗತಿ ಏನಾಗಬೇಕು ? ಒಂದು ಕೋಟಿ ರೂಪಾಯಿ ಹೋಯಿತು ಎಂದು ಹೇಳಿದರೆ, ಒಂದೊಂದು ತಾಲ್ಲೂಕಿಗೂ ೯ ಲಕ್ಷ ರೂಪಾಯಿಗಳ ಹಣ ಲ್ಯಾಪ್ಸ್ ಆಗುತ್ತದೆ, ಅಲ್ಲಿ ನಿರ್ಣಯಗಳು ತಿರಸ್ಕಾರವಾಗಿದೆ ಎಂದರೆ, ನೀವು ವರದಿ ತರಿಸಿಕೊಂಡು ಬೇರೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಈ ವಿಚಾರದಲ್ಲಿ ನನ್ನ ಸಲಹೆ ಹೇಳುವುದಾದರೆ, ನೀವು ರಾಜಿನಾಮೆ ಕೊಟ್ಟು ಹೊರಗೆ ಹೋಗಿ. ಮಾನ್ಯ ಬಸವಲಿಂಗಪ್ಪ ನವರು ಅಲ್ಲಿಂದ ವರದಿಯನ್ನು ತರಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ, ಹಾಗಿದ್ದರೆ ಅವರು ರಾಜಿನಾಮೆ ಕೊಟ್ಟು ಹೊರಗೆ ಹೋಗಲಿ. ಅನಂತರ ನೋಡೋಣ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರದ್ದು ವಿಪರೀತ ವಾದ ಆಯಿತು. ನಿಮಗೆ ತಕ್ಕಂಥ ಉತ್ತರವನ್ನು ನಾನು ಹೇಳುತ್ತೇನೆ. ಕೋಲಾರ ಜಿಲ್ಲಾಪರಿಷತ್ತು ವಿಶೇಷ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಈಗಾಗಲೇ ಹೇಳಿದ್ದೇನೆ. ಅಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಜಾಸ್ತಿ ಇದ್ದಾರೆ. ಮೊದಲು ಅಲ್ಲಿ ಆಡಳಿತ ಮಾಡುತ್ತಿದ್ದವರು ಈಗ ಅಲ್ಪಸಂಖ್ಯೆಯಲ್ಲಿದ್ದಾರೆ...

ಅಧ್ಯಕ್ಷರು.—ಇವರು ಹೋಗಿ ಅಲ್ಲಿ ಹಸ್ತಕ್ಷೇಪ ಮಾಡಲಿ, ಎಂದು ಸಲಹೆ ಮಾಡುತ್ತೀರಾ...

ಶ್ರೀ ಸಿ. ಬೈರೇಗೌಡ.—ಪ್ರಜಾಪ್ರಭುತ್ವದ ನೀತಿ ಪ್ರಕಾರ, ಬಹುಮಂತ ಇಲ್ಲದಿದ್ದರೆ, ಆದರೆ ಕಾನೂನು ಪ್ರಕಾರ ಶೀರ್ಮಾನವಾಗಬೇಕಾಗುತ್ತದೆ. ಆದು ಹಸ್ತಕ್ಷೇಪ ಮಾಡುವುದು. ಬಿಡುವುದು ಸರ್ಕಾರಕ್ಕೆ ಬಿಟ್ಟರತಕ್ಕ ವಿಚಾರ. ಹಸ್ತಕ್ಷೇಪ ಮಾಡಿ ಎಂದು ನಾನು ಹೇಳುವುದಿಲ್ಲ.

ಅಧ್ಯಕ್ಷರು.—ಜಿಲ್ಲಾ ಪರಿಷತ್ತುಗಳಲ್ಲಿ ಕೆಲಸ ಮಾಡುವವರು ಸರ್ವತಂತ್ರ ಸ್ವತಂತ್ರರು, ಅಲ್ಲಿ ಸರ್ಕಾರದ ರೂಲ್ ಏನಿದೆ ?

ಶ್ರೀ ಸಿ. ಬೈರೇಗೌಡ,—ಇವತ್ತು ಅಲ್ಲಿ ಒಂದುಕೋಟಿ ರೂಪಾಯಿಯಷ್ಟು ಹಣ ಲ್ಯಾಪ್ಸ್ ಆಗುತ್ತಿದೆ. ನನ್ನ ಮಾಹಿತಿ ಪ್ರಕಾರ ಹೇಳುತ್ತಿದ್ದೇನೆ. ಇದರಲ್ಲಿ ಹೆಚ್ಚು ಇರಬಹುದು ಅಥವಾ ಕಡಿಮೆ ಇರಬಹುದು. ಈ ರೀತಿ ಲ್ಯಾಪ್ಸ್ ಆದರೆ, ಆ ಜಿಲ್ಲೆಯ ಗತಿ ಏನಾಯಿತು ಏನು ಬೇಕಾದರೂ ಮಾಡಿಕೊಳ್ಳಿ ಎಂದು ಸರ್ಕಾರದವರು ಸುಮ್ಮನೆ ಇದ್ದರೆ, ಸರ್ಕಾರ ಏಕಿರಬೇಕು ? ಇದರಲ್ಲಿ ಕೆಲವು ಕೇಂದ್ರ ಸರ್ಕಾರದ ಯೋಜನೆಗಳೂ ಇವೆ. ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್‌ಗೆ ಶೇಕಡ ೫೦ರಷ್ಟು ಹಣವನ್ನು ಖರ್ಚು ಮಾಡಿಲ್ಲವೆಂದು ಹೇಳುತ್ತಾರೆ. ಇವತ್ತು ಇಂತಹ ಪರಿಸ್ಥಿತಿ ಅಲ್ಲಿ ಇದೆ. ವಿಶೇಷ ಘಟಕ ಯೋಜನೆಯ ಕಾರ್ಯಕ್ರಮಗಳು ಸ್ಥಗಿತವಾಗುತ್ತಿವೆ. ಹರಿಜನರಿಗೆ, ದುರ್ಬಲವರ್ಗದವರಿಗೆ ಅನುಕೂಲವಾಗತಕ್ಕ ಯೋಜನೆಗಳು ಸ್ಥಗಿತವಾಗುತ್ತಿವೆ. ಇವುಗಳನ್ನು ನೋಡಿಕೊಂಡು ನೀವು ಏಕಿರಬೇಕು ರಾಜೀನಾಮೆ ಕೊಟ್ಟು ಹೋಗಿ.

ಶ್ರೀ ಎ. ಪಿ. ವೆಂಕಟೇಶ್.—ಮೈಸೂರು ಜಿಲ್ಲೆಯಲ್ಲಿ ಜನತಾ ದಳದ ಜಿಲ್ಲಾ ಪರಿಷತ್ ಇದೆ. ಅಲ್ಲಿಗೆ ಸಚಿವರು ಹೋಗಿ ಅದು ಸರಿಯಿಲ್ಲ ಇದು ಸರಿಯಿಲ್ಲ ಎಂದು ಗಲಾಟೆ ಮಾಡುತ್ತಾರೆ. ಅದೇರೀತಿ ಕೋಲಾರದಲ್ಲಿ ಮಾಡುವುದು ಬೇಡವೇ ? ಅಲ್ಲಿ ಹೋಗಿ ಗಲಾಟೆ ಮಾಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಜಿಲ್ಲಾ ಪರಿಷತ್ ವ್ಯವಹಾರಗಳನ್ನು ನಾನು ಪರಿಶೀಲನೆ ಮಾಡುತ್ತಾ ಇರುತ್ತೇನೆ. ಕೋಲಾರ ಜಿಲ್ಲೆಗೆ ಹೋಗಿಲ್ಲ. ಹೋಗಬೇಕೆಂದು ಮಾನ್ಯ ಸದಸ್ಯರ ಆಸೆ ಇದ್ದರೆ ನಾನು ಅಲ್ಲಿಗೆ ಬರುತ್ತೇನೆ. ಆಸೆಸ್ ಮಾಡುತ್ತೇನೆ. ಲುಕ್ಸಾನು ಆಗಿದ್ದರೆ ನೋಡುತ್ತೇನೆ. ಮತ್ತು ಕೆಲಸ ಕಾರ್ಯಗಳು ಸುಲಲಿತವಾಗಿ ನಡೆಯಬೇಕಾದರೆ ನನ್ನ ಜೊತೆ ನೀವು ಸಹಕಾರ ನೀಡಿ, ನಿರ್ಣಯಗಳು ಆಗುವುದಿಲ್ಲ, ಆಗುವುದಿಲ್ಲ ಎಂದರೆ, ಆಗುವುದಿಲ್ಲ. ಕಾರಣ ತಮಗೆ ಗೊತ್ತು. ನನ್ನ ಜೊತೆ ಸಹಕಾರ ಮಾಡಿ. ನಿರ್ಣಯಗಳು ಪಾಸಾಗುವ ಹಾಗೆ ಮಾಡುತ್ತೇನೆ. ನೀವು ಸಹಕಾರ ನೀಡುತ್ತೀರಾ ?

ಶ್ರೀ ಸಿ. ಬೈರೇಗೌಡ,—ಇವರು ಎಲ್ಲೆಲ್ಲೋ ಹೋಗಂತಿದ್ದಾರೆ. ನನ್ನ ಆಸೆಗಳು ನೂರೆಂಟು ಇವೆ. ಆ ನೂರೆಂಟು ಆಸೆಗಳನ್ನು ಇವರ ಕೈಲಿ ಪೂರೈಸುವುದಕ್ಕೆ ಆಗುವುದಿಲ್ಲ. ಆದರೆ ನನ್ನ ಆಸೆ ಇರತಕ್ಕದ್ದು ಒಂದೇ ಒಂದು ಏನು ಕೋಲಾರ ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ; ಅವು ನಡೆಯಬೇಕು. ಅದಕ್ಕೆ ಏನು ಹೇಳುತ್ತೀರಿ. ತಮ್ಮ ಜವಾಬ್ದಾರಿ ಇದರಲ್ಲಿ ಇಲ್ಲ ಎಂದು ಹೇಳುವುದಾದರೆ ತಾವು ಇಲ್ಲಿ ಕುಳಿತುಕೊಳ್ಳುವುದೇ ಬೇಡ, ಹೊರಗೆ ಹೋಗಿ.

ಶ್ರೀ ಬಿ. ಬಸವಲಿಂಗಪ್ಪ.—ಬೀದಿಯಲ್ಲಿ ಜನ ಮಾತನಾಡುವ ರೀತಿ ಮಾತನಾಡುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ.—ಆ ರೀತಿ ಮಾತನಾಡುತ್ತಾ ಇರುವವರು ನೀವು. ನಾವಲ್ಲ. ಇದು ಗೊತ್ತಿಲ್ಲ ಎಂದು ಹೇಳಿದರೆ ಏತಕ್ಕೆ ಇಲ್ಲಿ ಇರಬೇಕು ನೀವು. ಇದು ಬೀದಿಯಲ್ಲಿ ಹೋಗುವವರು ಆಡತಕ್ಕಂಥ ಮಾತೆಂದು ಹೇಳುವುದಾದರೆ ಇದು ಯಾರು ಹೇಳತಕ್ಕಂಥ ಮಾತು ? ಬೀದಿಯಲ್ಲಿ ಹೋಗುವವರು ಮಾತನಾಡುವಂತೆ ಮಾತನಾಡುವವರು ನಾನೋ ನೀವೋ. ಅವರು ಕೊಟ್ಟರತಕ್ಕಂಥ ಉತ್ತರ ನೋಡಿದರೆ ಅವರಿಗೇ ನಾಚಿಕೆ ಆಗಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ನಾಚಿಕೆ ಆಗಬೇಕು. ಬೇಜವಾಬ್ದಾರಿಯಿಂದ ನೀವು ಮಾತನಾಡುತ್ತಿದ್ದೀರಿ.

ಶ್ರೀ ಸಿ. ಬೈರೇಗೌಡ.—ನೀವು ಬೇಜವಾಬ್ದಾರಿಯಿಂದ ಉತ್ತರ ಕೊಟ್ಟಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಏನು ಬೇಜವಾಬ್ದಾರಿಯಿಂದ ಉತ್ತರ ಕೊಟ್ಟಿದ್ದೇನೆಯೇ ?

ಅಧ್ಯಕ್ಷರು.— ಮಾನ್ಯ ಬೈರೇಗೌಡರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ.— ವಿಷಯ ಗೊತ್ತಿಲ್ಲ ಎಂದರೆ ಇವರು ಇಲ್ಲಿ ಏತಕ್ಕೆ ಇರಬೇಕು ?

ಅಧ್ಯಕ್ಷರು.— ದಯವಿಟ್ಟು ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.— ನಾನು ನಿಮ್ಮನ್ನು ಮಾತನಾಡಲು ಕರೆದಿಲ್ಲ, ದಯವಿಟ್ಟು ಕುಳಿತುಕೊಳ್ಳಿ. ಈ ಸಭೆಯಲ್ಲಿ ಒಂದು ಆರ್ಡರ್ ಇರಬೇಕು. ಒಂದು ಶಿಸ್ತು ಇರಬೇಕು. ಸಂಯಮ ಇರಬೇಕು. ಈಗ ತಾವು ಕೇಳಿಂತಿರುವಂತೆ ಮಾನ್ಯ ಮಂತ್ರಿಗಳು ರಾಜೀನಾಮೆ ಕೊಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ರಾಜೀನಾಮೆ ಕೇಳಬೇಕಾಗಿದ್ದರೆ ಮಂತ್ರಿಮಂಡಲದ ಮೇಲೆ ಅವಿಶ್ವಾಸನಿರ್ಣಯ ತೆಗೆದುಕೊಂಡು ಬನ್ನಿ ಆವರು ರಾಜೀನಾಮೆ ಕೊಟ್ಟು ಹೋಗುತ್ತಾರೆ. ಮಾತು ಮಾತಿಗೆ ರಾಜೀನಾಮೆ ಕೊಡಿ, ರಾಜೀನಾಮೆ ಕೊಡಿ, ಎಂದು ಕೇಳುವುದರಲ್ಲಿ ಅರ್ಥವೂ ಇಲ್ಲ, ಔಚಿತ್ಯವೂ ಇಲ್ಲ. ಇನ್ನು ನೀವು ಕೇಳುತ್ತಿರತಕ್ಕಂಥ ಪ್ರಶ್ನೆ, ಕೋಲಾರ ಜಿಲ್ಲಾ ಪರಿಷತ್ತಿನಲ್ಲಿ ಒಂದು ಅನಿಶ್ಚಿತ ವಾತಾವರಣ ಉಂಟಾಗಿರುವುದರ ಬಗ್ಗೆ ಈ ರೀತಿ ಉಂಟಾಗಿರತಕ್ಕಂಥಾದ್ದಕ್ಕೆ ಅಲ್ಲಿ ರಾಜಕೀಯ ಏರುಪೇರು ಉಂಟಾಗಿರತಕ್ಕಂಥಾದ್ದು ಕಾರಣವಾಗಿದೆ, ಅದಕ್ಕೆ ನೀವುಗಳೆಲ್ಲರೂ ಒಟ್ಟಾಗಿ ಸೇರಿ ಪರಿಹಾರ ಕಂಡುಹಿಡಿಯಬೇಕೇ ಹೊರತು ಮಂತ್ರಿಗಳ ರಾಜೀನಾಮೆ ಕೇಳುವುದರ ಮೂಲಕ ಕೋಲಾರ ಜಿಲ್ಲೆಗೆ ಹೊಸದಾಗಿ ಒಂದು ಕೋಟಿ ರೂಪಾಯಿ ಏನಾದರೂ ಬರುತ್ತದಯೋ ? ಆದುದರಿಂದ ಅದು ಪ್ರಯೋಜನವಾಗುವುದಿಲ್ಲ.ಮಾನ್ಯ ಬಸವಲಿಂಗಪ್ಪನವರು ಕೋಲಾರ ಜಿಲ್ಲೆಗೆ ಬರುತ್ತೇನೆಂದು ಹೇಳಿದ್ದಾರೆ, ಒಂದು ಕೋಟಿ ರೂಪಾಯಿ ಲ್ಯಾಪ್ಸ್ ಆಗುತ್ತದೆ ಎಂದು ನಿಮಗೆ ಭಯ ಇದೆ. ಆ ಭಯ, ಕಳವಳವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ನಾನು ಬರುತ್ತೇನೆ, ನೋಡುತ್ತೇನೆ, ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ನಿಮ್ಮ ಸಹಕಾರವನ್ನು ಅವರು ಕೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ.— ಅಧ್ಯಕ್ಷರೇ, ತಮ್ಮ ಸಲಹೆಯನ್ನು ನಾನು ಶಿರಸಾವಹಿಸಿ ಪಾಲಿಸುತ್ತೇನೆ. ತಾವು ಸಭೆಯ ಅಧ್ಯಕ್ಷರಾಗಿರುವ ಕಾರಣ ತಾವು ಹೇಳಿದ ಮಾತನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿರುವುದು ಮತ್ತು ಪಾಲನೆ ಮಾಡಬೇಕಾಗಿರುವುದು ನನ್ನ ಕರ್ತವ್ಯವೂ ಹೌದು. ಆದರೆ ಉತ್ತರ ನೋಡಿದಾಗ ಗಮನಕ್ಕೆ ಬಂದಿಲ್ಲ ಎಂದು ಹೇಳಿದರೆ ನಾವು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಡುವುದು ಏತಕ್ಕೆ ? ಬಂದಿಲ್ಲ ಎಂದರೆ ಏನು ಹೇಳಬೇಕು, ಹೊರಗಡೆ ಹೋಗಿ ಎಂದು ಹೇಳದೆ ಏನು ಹೇಳಬೇಕಂ.

ಅಧ್ಯಕ್ಷರು.— ನೀವು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಮೇಲೆ ಅವರ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂಬುದನ್ನು ನಾವು ಊಹೆ ಮಾಡಬಹುದು.

ಶ್ರೀ ಸಿ ಬೈರೇಗೌಡ.— ನಾನು ಕಳುಹಿಸಿ ನಾಲ್ಕೈದು ದಿವಸ ಆಗಿದೆ. ಉತ್ತರ ಕೊಡುತ್ತಿರತಕ್ಕಂಥಾದ್ದು ಇವತ್ತು. ಅಲ್ಲಿಂದ ಉತ್ತರ ತರಿಸುವುದಕ್ಕೆ ಏನೂ ಅಡ್ಡಿ ಇರಲಿಲ್ಲವಲ್ಲ ?

ಅಧ್ಯಕ್ಷರು.— ತಾವು ಸಮಾಧಾನವಾಗಿ ಕುಳಿತರೆ ನಾನು ಸಚಿವರನ್ನು ಕರೆಯುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಇವರು ಮಂತ್ರಿಗಳಾಗಿದ್ದಾಗ ಎಷ್ಟುಸಲ ಈ ರೀತಿ ಉತ್ತರ ಕೊಟ್ಟಿದ್ದೀರಿ ?

(ಗೊಂದಲ)

ಅಧ್ಯಕ್ಷರು.— ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ಶಿವಪ್ಪ ಗಾರ್ಡಿಯವರೇ, ನೀವೂ ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ನನ್ನ ಗಮನಕ್ಕೆ ನಿನ್ನೆ ಸಾಯಂಕಾಲ ಬಂತು. ಸಾಯಂಕಾಲ ಬಂದಮೇಲೆ ನಾನು ಅಲ್ಲಿಗೆ ಹೋಗಿ ಬರಬೇಕಾಗಿತ್ತೇ ? ಅವರ ಇಷ್ಟದ ಪ್ರಕಾರ ಏನು ಬೇಕಾದರೂ ಮಾತನಾಡುತ್ತಾರೆ. ನಾನು ಸುಳ್ಳು ಹೇಳುವುದಕ್ಕೆ ಇಲ್ಲಿ ಬಂದಿದ್ದೇನೆಯೇ ? ಇರತಕ್ಕಂಥ ಪರಿಸ್ಥಿತಿಯನ್ನು ವಿವರವಾಗಿ ಹೇಳಿದ್ದೇನೆ. ಕೋಲಾರ ಜಿಲ್ಲೆಯ ಪರಿಸ್ಥಿತಿ ಹೀಗೆ ಇದೆ, ತಾವು ನನ್ನ ಜೊತೆ ಸಹಕಾರ ಮಾಡಿ ಎಂದು ಹೇಳಿದ್ದೇನೆ. ನೀವು ಅದನ್ನು ಬಿಟ್ಟು ಎದ್ದು ಎದ್ದು ನಿಂತುಕೊಂಡರೆ ಹೇಗೆ ಸ್ವಾಮಿ ? ನಮ್ಮಿಂದ ಏನಾದರೂ ಕರ್ತವ್ಯ ಚ್ಯುತಿ ಆಗಿದ್ದರೆ ತಾವು ಆಗ ಆ ರೀತಿ ವಾತಾನಾಡಬಹುದು. ತಮಗೆ ಏತಕ್ಕೆ ಆಷ್ಟು ಸಿಟ್ಟು ಬರುತ್ತದೆ ? ಇದು ನಿಮ್ಮ ಸ್ವಂತದ್ದು ಏನೂ ಅಲ್ಲ. ನನ್ನ ಸ್ವಂತದ್ದು ಏನೂ ಅಲ್ಲ. ಇದು ರಾಜ್ಯದ ಜನತೆಗೆ ಸಂಬಂಧಪಟ್ಟಂತಹ ವಿಷಯ, ನಾವೆಲ್ಲಾ ಸೇರಿ ಸಮಾಧಾನವಾಗಿ ವಿಚಾರ ಮಾಡೋಣ, ಸಮಾಧಾನವಾಗಿ ಉತ್ತರ ಪಡೆದುಕೊಳ್ಳಬೇಕು. ನಾನು ಕೊಟ್ಟ ಉತ್ತರದಲ್ಲಿ ತಪ್ಪೇನಾದರೂ ಇದ್ದರೆ ತಾವು ನನಗೆ ಆಗ ಮಾರ್ಗದರ್ಶನ ಮಾಡಬೇಕು. ಆದರಲ್ಲಿ ತಪ್ಪೇನೂ ಇಲ್ಲ. ಅಲ್ಲಿ ನಡೆದ ನಡವಳಿಕೆಗಳು ಸೀದಾ ನನ್ನ ಹತ್ತಿರ ಬರುತ್ತವೆಯೇ? ಎಲ್ಲಾ ಜಿಲ್ಲಾ ಪರಿಷತ್ತಿನಲ್ಲಿ ನಡವಳಿಕೆಗಳು ನಡೆಯುತ್ತವೆ. ಸಾವಿರಾರು ಮೀಟಿಂಗ್‌ಗಳು ನಡೆಯುತ್ತವೆ. ಜಿಲ್ಲಾ ಪರಿಷತ್ತಿನವರು ಸಬ್ ಕಮಿಟಿ ಮೀಟಿಂಗ್‌ಗಳನ್ನು ಮಾಡುತ್ತಾರೆ. ಆ ನಡವಳಿಕೆಗಳು ಸೀದಾ ನನ್ನ ಹತ್ತಿರ ಬಂದರೆ ತಾನೆ ನನಗೆ ಗೊತ್ತಾಗುವುದು. ತಾವು ಅದನ್ನು ನಿರೀಕ್ಷೆ ಮಾಡುವ ಔಚಿತ್ಯವಾದರೂ

ಏನು ? ನಾನು ಬ. ದಿಲ್ಲವೆಂದು ಹೇಳಿದರೆ ತಾವು ಒಪ್ಪಿಕೊಳ್ಳಬೇಕು. ನಾನು ಏನನ್ನಾದರೂ ನೇರವಾಗಿ ಹೇಳುತ್ತೇನೆ. ಸುಳ್ಳು ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಮನಸ್ಸಿನಲ್ಲಿರತಕ್ಕಂಥ ಆಂತಕವನ್ನು ಪರಿಹಾರ ಮಾಡಲು ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ — ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಅದೇನೆಂದರೆ ನಿನ್ನೆಯ ದಿವಸ ಸಾಯಂಕಾಲ ಇದು ತಮ್ಮ ಗಮನಕ್ಕೆ ಬಂತು ಎನ್ನುವ ಮಾತನ್ನು ಹೇಳಿದ್ದಾರೆ. ಅಂದರೆ ಅದರ ಜವಾಬ್ದಾರಿ ತಮ್ಮ ಮೇಲೆ ಬರುತ್ತದೆ. ನಿನ್ನೆ ಸಾಯಂಕಾಲ ಮಾನ್ಯ ಮಂತ್ರಿಗಳ ಗಮನಕ್ಕೆ ಆ ನೋಟೀಸ್ ಬಂದಿದ್ದರೆ ಅದನ್ನು ನಾನು ಪ್ರಶ್ನೆ ಮಾಡಲೇಬೇಕಾಗುತ್ತದೆ. ನಾನು ನೋಟೀಸ್ ಕೊಟ್ಟು ೪-೫ ದಿವಸಗಳಾಗಿದೆ ಇದುವರೆವಿಗೂ ಆ ನೋಟೀಸ್ ಎಲ್ಲಿತ್ತು? ನನಗೆ ಅದು ಗೊತ್ತಾಗಬೇಕು. ಈಗ ಯಾರ ಮೇಲೋ ಜವಾಬ್ದಾರಿ ಹಾಕಿ ಅವರು ತಪ್ಪಿಸಿಕೊಳ್ಳುತ್ತಿದ್ದಾರೆ. ಬೇರೆಯವರ ಮುಖಕ್ಕೆ ಮಸಿ ಬಳಿಯತಕ್ಕಂಥ ವ್ಯವಹಾರ ಮಾನ್ಯ ಮಂತ್ರಿಗಳು ಮಾಡುತ್ತಿದ್ದಾರೆ. ನಾನು ನೋಟೀಸ್ ಕೊಟ್ಟು ೪-೫ ದಿವಸಗಳಾಗಿದೆ. ನಿಮ್ಮ ಕಾರ್ಯಾಲಯದಿಂದ ಮಾನ್ಯ ಮಂತ್ರಿಯವರಿಗೆ ಯಾವಾಗ ಅದು ಹೋಯಿತು. ಅದನ್ನು ದಯವಾಡಿ ತಿಳಿಸಬೇಕು. ಮಾನ್ಯ ಮಂತ್ರಿಗಳು ಸುಳ್ಳು ಹೇಳುವುದಿಲ್ಲವೆಂದು ಸಹ ಹೇಳುತ್ತಿದ್ದಾರೆ. ಹಾಗಾದರೆ ಈ ಲೋಪಕ್ಕೆ ಯಾರು ಕಾರಣರು ? ಒಬ್ಬ ಮಾನ್ಯ ಸದಸ್ಯರ ಹಕ್ಕನ್ನು ಈ ರೀತಿ ಮೊಟಕುಗೊಳಿಸತಕ್ಕಂಥಾದ್ದಕ್ಕೆ ಯಾರು ಪ್ರಯತ್ನ ಮಾಡಿದರು, ಇದು ನನ್ನನ್ನೂ ಕಾಡಿಸುತ್ತಿರತಕ್ಕಂಥ ಪ್ರಶ್ನೆ. ಈ ಜವಾಬ್ದಾರಿಯನ್ನು ತಮ್ಮ ಮೇಲೆ ಹಾಕಿದ್ದಾರೆ. ತಾವು ನನಗೆ ಉತ್ತರ ಕೊಡಬೇಕು.

ಅಧ್ಯಕ್ಷರು — ನಮಗೆ ಯಾವಾಗ ಬಂತು ಎಂಬುದನ್ನು ಮತ್ತು ಯಾವಾಗ ಕಳುಹಿಸಿದ್ದಾರೆಂಬುದನ್ನು ವಿಚಾರಿಸಿ ತಮಗೆ ತಿಳಿಸುತ್ತೇನೆ. ಈಗ ಮಾನ್ಯ ಸದಸ್ಯರಾದ ಶ್ರೀ ಆರ್. ಎನ್. ನಾಯಕ್ ರವರ ಗಮನ ಸೆಳೆಯುವ ಸೂಚನೆಯನ್ನ ತೆಗೆದುಕೊಳ್ಳುತ್ತೇನೆ.

2) ಭಟ್ಕಳ-ಹೊನ್ನಾವರ ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿ ಕೆಲವರು ಅರಣ್ಯ ಹಾಗೂ ರೆವಿನ್ಯೂ ಭೂಮಿಯನ್ನು ಅತಿಕ್ರಮಿಸಿ ಮನೆಗಳನ್ನು ಕಟ್ಟಿರುವುದರ ಬಗ್ಗೆ

ಶ್ರೀ ಆರ್.ಎನ್. ನಾಯಕ್ (ಭಟ್ಕಳ). —ಮಾನ್ಯ ಅಧ್ಯಕ್ಷರೇ, ಭಟ್ಕಳ ಹೊನ್ನಾವರ ಪುರಸಭೆಯ ವ್ಯಾಪ್ತಿಯಲ್ಲಿ ಹಾಗೂ ಸುತ್ತಮುತ್ತಲಿರುವ ಹಳ್ಳಿಗಳಲ್ಲಿ ಕೆಲವರು ಅರಣ್ಯ ಹಾಗೂ ರೆವಿನ್ಯೂ ಭೂಮಿ ಅತಿಕ್ರಮಿಸಿ ಪರವಾನಿಗಿ ಪಡೆಯದೇ ಮನೆ ಕಟ್ಟಿ ತದನಂತರ ಅದೇ ಪುರಸಭೆ ಹಾಗೂ ಮಂಡಲ ಪಂಚಾಯತ್‌ಗಳ ಮೂಲಕ ವಿದ್ಯುತ್ ಸಂಪರ್ಕ ಪಡೆಯಲು ಪರವಾನಿಗೆ ನೀಡಿರುವುದಲ್ಲದೆ ಕರಾಕರಣೆ ಮಾಡಿ ದಾಖಲೆ ನಿರ್ಮಿಸುತ್ತಿರುವ ಬಗ್ಗೆ ಮಾನ್ಯ ಬಂದರು ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ (ಮಾನ್ಯ ಬಂದರು ಮತ್ತು ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಭಟ್ಕಳ ಪುರಸಭೆ ವತಿಯಿಂದ ಅರಣ್ಯ ಇಲಾಖಾ ಮತ್ತು ರೆವಿನ್ಯೂ ಭೂಮಿಯಲ್ಲಿ ಮನೆ ಕಟ್ಟಿ ತದನಂತರ ವಿದ್ಯುಚ್ಛಕ್ತಿ ಸರಬರಾಜಿಗೆ ಆಕ್ಷೇಪಣಾ ರಹಿತ ಪತ್ರ ನೀಡಿರುವುದಿಲ್ಲ. ಹಾಗೂ ಕಟ್ಟಡಗಳಿಗೆ ಕರಾಕರಣೆ ಮಾಡಿದ್ದಿಲ್ಲ.

ಹೊನ್ನಾವರದಲ್ಲಿ ಸುಮಾರು ೧೫-೨೦ ವರ್ಷಗಳಿಂದ ರೆವಿನ್ಯೂ ಮತ್ತು ಅರಣ್ಯ ಇಲಾಖೆಯ ಜಮೀನುಗಳ ಮೇಲೆ ಅನಧಿಕೃತವಾಗಿ ಕಟ್ಟಡಗಳನ್ನು ಕಟ್ಟಿರುವುದು ನಿಜ. ಅವುಗಳ ವಿವರ ಈ ರೀತಿ ಇರುತ್ತದೆ.

	ಮನೆಗಳ ಸಂಖ್ಯೆ
೧) ಅರಣ್ಯ ಇಲಾಖೆ ಜಮೀನಿನಲ್ಲಿ	೧೧೦
೨) ರೆವಿನ್ಯೂ ಜಮೀನಿನಲ್ಲಿ	೨೯

ಈ ಮನೆಗಳಿಗೆ ಸಾರ್ವಜನಿಕ ಮಾನವೀಯತೆ ದೃಷ್ಟಿಯಿಂದ ರಸ್ತೆ ಮತ್ತು ನೀರಿನ ಸೌಕರ್ಯಗಳನ್ನು ಒದಗಿಸಿರುತ್ತೆ. ಆದರೆ ವಿದ್ಯುತ್ ಇಲಾಖೆಗೆ ಎನ್.ಓ.ಸಿ.ಗಳನ್ನು ಪುರಸ್ಕರಿಸಿರುವ ಪುರಸಭೆಗಳಿಂದ ನೀಡಿಲ್ಲ. ವಿದ್ಯುತ್‌ಮಂಡಲಿಯೆಂದರೇ ಸ್ವತಃ ಜವಾಬ್ದಾರಿಯಿಂದ ನೀಡಿರುತ್ತಾರೆ.

ಶ್ರೀ ಆರ್.ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಭಟ್ಕಳ ಹೊನ್ನಾವರ ಪುರಸಭೆ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಅರಣ್ಯ ಇಲಾಖೆಯ ಮತ್ತು ರೆವಿನ್ಯೂ ಜಮೀನುಗಳು ಏನಾದರೂ ಇದ್ದರೆ